☛ ತ್ರಿವೇಣೀ ಸಂಗಮದಲ್ಲಿ ನಡೆಯುವ 'ಮಾಘಮೇಲಾ' ಉತ್ಸವದ ಸಂದರ್ಭದಲ್ಲಿ ಅಲಹಾಬಾದ್‌ನ ರಾಮಕೃಷ್ಣ ಮಠದ ಕೇಂದ್ರವು ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಪ್ರತಿವರ್ಷವೂ ಒದಗಿಸುತ್ತಿದೆ. ಈ ವರ್ಷವೂ ಜನವರಿ ೧೩ರಿಂದ ಫೆಬ್ರವರಿ ೧೩ರವರೆಗೆ ನಡೆದ ಈ ವಿಶೇಷ ಉತ್ಸವಗಳಲ್ಲಿ ಶ್ರೀರಾಮಕೃಷ್ಣರ ಶ್ರೀಮಾತೆ ಹಾಗೂ ಸ್ವಾಮಿಜಿಯ ಜೀವನಸಂದೇಶಗಳನ್ನು ತಿಳಿಸುವ ಚಿತ್ರಪ್ರದರ್ಶನವನ್ನು ಏರ್ಪಡಿಸಲಾಗಿದ್ದು ಸುಮಾರು ಒಂದು ಲಕ್ಷ ಯಾತ್ರಿಕರು ಇದನ್ನು ವೀಕ್ಷಿಸಿದ್ದಾರೆ. ೧೮,೦೦೦ ರೋಗಿಗಳು ಉಚಿತ ವೈದ್ಯಕೀಯ ಸೇವೆಯನ್ನು ಪಡೆದುಕೊಂಡಿದ್ದಾರೆ.

☛ ಚೆನ್ನೈನಲ್ಲಿರುವ ವಿದ್ಯಾಪೀಠವು ತನ್ನ ವಜ್ರಮಹೋತ್ಸವದ ಅಂಗವಾಗಿ ಜನವರಿಯಿಂದ ಮಾರ್ಚ್ ತಿಂಗಳವರೆಗೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿತ್ತು. ಶಿಕ್ಷಕರ ಕಾರ್ಯಾಗಾರ, ಪ್ರವಚನಗಳು, ವಿಚಾರ ಸಂಕಿರಣಗಳು, ಕಾಲೇಜು ವಿದ್ಯಾರ್ಥಿಗಳಿಗಾಗಿ ಕ್ರೀಡೆಗಳು, ಪ್ರಬಂಧಬರಹ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

☛ ಕೊಲ್ಕತಾದ ನರೇಂದ್ರಪುರ ರಾಮಕೃಷ್ಣ ಮಿಷನ್ ಆಶ್ರಮದ ಲೋಕಶಿಕ್ಷಾ ಪರಿಷದ್ ಸಂಸ್ಥೆಗೆ ಕೇಂದ್ರ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಸಚಿವಾಲಯವು **ನಿರ್ಮಲ ಗ್ರಾಮ ಪುರಸ್ಕಾರ** ಪ್ರಶಸ್ತಿಯನ್ನು ನೀಡಿದೆ. ಗ್ರಾಮಾಂತರ ಪ್ರದೇಶಗಳ ಸ್ವಚ್ಛತೆ ಹಾಗೂ ನೈರ್ಮಲ್ಯದ ಅಭಿವೃದ್ಧಿಗೆ ಈ ಸಂಸ್ಥೆ ಅವಿರತವಾಗಿ ಪರಿಶ್ರಮಿಸುತ್ತಿದೆ. ಮಾರ್ಚ್ ೨೩ರಂದು ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ಮರಣಿಕೆ, ಪ್ರಶಸ್ತಿಪತ್ರ ಹಾಗೂ ೫೦,೦೦೦ ರೂಪಾಯಿಗಳ ಬಹುಮಾನವನ್ನು ರಾಷ್ಟ್ರಪತಿಗಳಾದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಸಂಸ್ಥೆಯ ಕಾರ್ಯದರ್ಶಿಗಳಿಗೆ ನೀಡಿದರು.

☛ ಚೆನ್ನೈ, ಲಕ್ನೋ, ಮುಂಬಯಿ, ಬೆಂಗಳೂರಿನ ಹಲಸೂರು, ಬಿಹಾರದ ಮುಜಫರ್‌ಪುರ, ಗುಜರಾತಿನ ಪೋರ್‌ಬಂದರ್ ಹಾಗೂ ಪಶ್ಚಿಮ ಬಂಗಾಳದ ಆಸನ್‌ಸೋಲ್, ಗಡ್‌ಬೇತಾ, ಸರ್ಗಾಚಿ ಕೇಂದ್ರಗಳು ಕಳೆದ ಫೆಬ್ರವರಿ ಹಾಗೂ ಮಾರ್ಚ್ ತಿಂಗಳುಗಳಲ್ಲಿ ಉಚಿತ ಕಣ್ಣು ತಪಾಸಣೆ ಶಿಬಿರಗಳನ್ನು ನಡೆಸಿದವು. ೪೬೨೩ ರೋಗಿಗಳ ತಪಾಸಣೆಯಾಗಿದ್ದು ಅವರ ಪೈಕಿ ೪೪೬ ಜನರಿಗೆ ಉಚಿತ ಕನ್ನಡಕಗಳನ್ನು ನೀಡಲಾಗಿದೆ ಹಾಗೂ ೧,೦೨೧ ರೋಗಿಗಳಿಗೆ ಉಚಿತ ಶಸ್ತ್ರಚಿಕಿತ್ಸೆಯನ್ನೂ ಮಾಡಲಾಗಿದೆ.

☛ ಪಶ್ಚಿಮ ಬಂಗಾಳದ ಕಾಥಿ, ಗೋಲ್‌ಪಾರ್ಕ್, ಮಾಲ್ಡಾ, ಬೇಲೂರು ಮಠ, ರಾಮ್‌ಹರಿಪುರ, ಸರ್ಗಾಚಿ ಹಾಗೂ ಬಿಹಾರದ ಮುಜಫರ್‌ಪುರ್ ಕೇಂದ್ರಗಳ ಮೂಲಕ ಚಳಿಗಾಲದ ತೀವ್ರತೆಯನ್ನು ಸಹಿಸಲಾರದ ನಿರ್ಗತಿಕರಿಗೆ ೩,೮೨೧ ಕಂಬಳಿಗಳನ್ನು ನೀಡಲಾಯಿತು.

☛ ಒರಿಸ್ಸಾದ ಭುವನೇಶ್ವರದ ಬಳಿಯ ಕಾರ್ಗಿಲ್ ಬಸ್ತಿಯಲ್ಲಿ ಅಗ್ನಿ ದುರಂತದಿಂದ ಸಂತ್ರಸ್ತರಾಗಿದ್ದ ೮ ಕುಟುಂಬದವರಿಗೆ ಬಟ್ಟೆಗಳು, ಪಾತ್ರೆಗಳು, ಆಹಾರಪದಾರ್ಥಗಳು ಹಾಗೂ ಕಂಬಳಿಗಳನ್ನು ಭುವನೇಶ್ವರದ ಕೇಂದ್ರ ನೀಡಿದೆ.

# ಸುದ್ದಿ ಸಂಚಯ



**ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಪರವಾಗಿ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿಯವರು 'ಮಾನವ ರತ್ನ' ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವುದು**

☛ ಒರಿಸ್ಸಾದ ಪುರಿ ಕ್ಷೇತ್ರದ ಬಳಿಯಿರುವ ಸತ್ಯಬಾಡಿ ಇಲಾಖೆಯಲ್ಲಿ ಸಂಭವಿಸಿದ ಅಗ್ನಿದುರಂತದಲ್ಲಿ ೨೩ ಕುಟುಂಬಗಳು ತೀವ್ರ ನಷ್ಟವನ್ನು ಅನುಭವಿಸಿದ್ದು ಪುರಿ ಮಿಷನ್ ಕೇಂದ್ರವು ಅವರಿಗೆ ಬೇಕಾಗುವ ಎಲ್ಲ ಉಡಿಗೆ, ಪಾತ್ರೆ ಹಾಗೂ ಅಡಿಗೆ ಪದಾರ್ಥಗಳನ್ನು ನೀಡಿದೆ.

☛ ಕೊಲ್ಕತಾದ ಬಾಘ್‌ಬಜಾರಿನ ಉಲ್ಟಾ ಡಾಂಗಾ ರೈಲು ಹಳಿಯ ಬಳಿಯಿದ್ದ ಕೊಳೆಗೇರಿಯ ೧೭೦ ಗುಡಿಸಿಲುಗಳಿಗೆ ಬೆಂಕಿ ಬಿದ್ದಾಗ ಸಂತ್ರಸ್ತರಿಗೆ ಸ್ಥಳೀಯ ಕೇಂದ್ರವು ತಕ್ಷಣವೇ ಎಲ್ಲ ರೀತಿಯ ನೆರವನ್ನೂ ನೀಡಿದೆ.

☛ ನಿಃಸ್ವಾರ್ಥ ಸೇವೆ ಹಾಗೂ ಮಾನವೀಯ ಮೌಲ್ಯಗಳನ್ನು ಕಾಪಾಡುವುದರ ಮೂಲಕ ಮಾನವ ಜೀವನದ ಗುಣಮಟ್ಟವನ್ನು ಸಂವರ್ಧಿಸಿದೆ ಎಂದು ಗುರುತಿಸಿ ಮೈಸೂರಿನ ರೋಟರಿ ಕ್ಲಬ್ (ಪಶ್ಚಿಮ ಘಟಕವು) ಮಾರ್ಚ್ ೧೬, ೨೦೦೬ರಂದು ಮೈಸೂರು ರಾಮಕೃಷ್ಣ ಆಶ್ರಮಕ್ಕೆ 'ಮಾನವರತ್ನ' ಪುರಸ್ಕಾರವನ್ನು ನೀಡಿತು. ಆಶ್ರಮದ ಪರವಾಗಿ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದರು ಪುರಸ್ಕಾರವನ್ನು ಸ್ವೀಕರಿಸಿದರು. ರೋಟರಿ ಅಧ್ಯಕ್ಷರಾದ ಡಾ. ಆರ್. ಇಂದಿರಾ ಹಾಗೂ ಕಾರ್ಯದರ್ಶಿಗಳಾದ ಶ್ರೀ ಶ್ರೀಧರ ರಾಜ್ ಅರಸ್ ಅಲ್ಲದೆ ಅನೇಕ ಗಣ್ಯರು ಉಪಸ್ಥಿತರಿದ್ದರು. ✪